ಶ್ರೀ ಕಡಿದಾಳ್ ಮಂಜಪ್ಪ.—ಈಗಾಗಲೇ ಏನು ತಿಳಿಸಿದ್ದೇನೋ ಅದಕ್ಕಿಂತ ಹೆಚ್ಚಿನ ವಿವರ ಕೊಡುವುದಕ್ಕೆ ನಾನು ಶಕ್ತನಾಗಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಅಡ್ವರ್ಟೈಸ್ ಮಾಡುವಾಗಲೆ, ಕಾಲ ಸಾಲದೆಂಬುದು ಸರ್ಕಾರಕ್ಕೆ ಗೊತ್ತಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಾಲ ಸಾಕಾಗ ಬಹುದೆಂಬ ನಿರೀಕ್ಷೆಯಿಂದ ನಾವು ಪಬ್ಲಿಕ್ ಸರ್ವಿಸ್ ಕಮಿಷನ್‌ಅವರನ್ನು ರಿಕ್ವೆಸ್ಟ್‌ಮಾಡಿಕೊಂಡಿದ್ದೆವು.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಈಗ ತಪ್ಪನ್ನು ಊಹೆಮಾಡುವುದು ಬಿಡುವುದು ನೂಕ್ತವೆ ?

ಶ್ರೀ ಕಡಿದಾಳ್ ಮಂಜಪ್ಪ.—ತಪ್ಪು ಊಹೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಪ್ರಾಂತ ಪುನರ್ವಿಂಗಡಣೆಯಾದಮೇಲೆ ಪ್ರೊಬೇಷನುರಗಳನ್ನು ನೇಮಿಸಿಕೊಳ್ಳುತ್ತೀರಾ ?

ಅಧ್ಯಕ್ಷರು.—ಅದು ಊಹಾಪೋಹದ ಪ್ರಶ್ನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಿದ್ದಮೇಲೆ ಈಗ ಅರ್ಜಿಹಾಕಿಕೊಂಡಿರುವವರ ಗತಿಯೇನು ?

ಉತ್ತರವಿಲ್ಲ ; ನಗು !

Sri K. S. VASAN.—Will the application fees so far received by Government be considered at the time of recruitment of probationers ?

Sri Kadidal MANJAPPA.—That we will consider.

ಶ್ರೀ ಜೆ. ಮಹಮ್ಮದ್ ಇಮಾಂ.—ಸರ್ಕಾರದವರು ಪ್ರೊಬೇಷನರುಗಳನ್ನು ತೆಗೆದುಕೊಳ್ಳಬೇಕೆಂದು ಯಾವ ತಾರೀಖಿನಲ್ಲಿ ನಿರ್ಧರಿಸಿದರು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜೆ. ಮಹಮ್ಮದ್ ಇಮಾಂ.—ಮುಂದೆ ಈರೀತಿ ತೊಂದರೆ ಬರುತ್ತದೆಂದು ಕೆಲವರು ಈ ಸಭೆಯಲ್ಲಿ ಹೇಳಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

Sri J. MOHAMED IMAM.—When applications were called for, did the Government consult the Centre ?

Sri Kadidal MANJAPPA.—At that time, it was not necessary.

Sri J. MOHAMED IMAM.—Did the Government verify that there were hundred vacancies ?

Sri Kadidal MANJAPPA.—Yes; at the time when Government took decision there were vacancies.

Sri J. MOHAMED IMAM.—Are Government sure that there are those vacancies even now ?

Sri Kadidal MANJAPPA.—Yes.

Mr. SPEAKER.—Questions 817, 819, and 827, 830, may be taken up together.

National Extension Service Blocks.

Q.—817. Sri S. H. THAMMIAH *alias* HANUMANTHE GOWDARA THAMMIAH (Krisbnarajanagar).—

Will the Government be pleased to state :—

(*a*) the taluk in Mysore District in which they are contemplating to start National Extension Scheme ;

(*b*) the policy they adopt in selecting taluks for introducing the abovesaid scheme ?

A.—Sri Kadidal MANJAPPA (Chief Minister).—

(*a*) Periyapatna.

(*b*) The factors generally kept in view in selecting the taluks are—

(i) administrative convenience;

(ii) the probable number of blocks allottable to a District on the basis of the total rural population and the percentage of population covered by the existing blocks;

(iii) the contiguity of new blocks to be started to those already started ;

(iv) securing a quick increase in food production ; and

(v) the special needs of the areas inhabited by Backward Classes and Scheduled Tribes.

Q.—819. Sri K. LAKKAPPA (Channarayapatna).—

Will the Government be pleased to state :—

(*a*) when they accorded sanction for fresh National Extension Service Blocks for the current year ;

(*b*) the number of blocks that have been sanctioned during this year ?

A.—Sri Kadidal MANJAPPA (Chief Minister).—

(*a*) On 7th March 1956 and 14th August 1956.

(*b*) Six.

Q.—827. Sri T. HANUMIAH (Hiriyur—Scheduled Castes).—

Will the Government be pleased to state :—

(*a*) the sub-divisions of the Chitaldrug District in which the N.E.S. Blocks are working ;

(*b*) the facilities available there ;

(*c*) what are the several facilities that should be available to give top priority for starting the said blocks as decided by the Central Planning Commission ;

(*d*) whether they are aware of the public opinion prevailing as a result of granting N.E.S. Blocks in one and the same sub-divisions ?

A.—Sri Kadidal MANJAPPA (Chief Minister).—

(*a*) Davangere.

(*b*) The question is not clear. Please see the reply to clause (*c*).

(*c*) There are no special facilities, the availability of which determines the selection of areas for N.E.S. Blocks.

(*d*) No.

Q.—830. Srimathi B. L. SUBBAMMA (Chikmagalur-Mudigere).—

Will the Government be pleased to state:—

(*a*) the number of National Extension Service Blocks sanctioned this year and the taluks where they have been sanctioned ;

(*b*) the districts to which they have been given ;

(*c*) whether any rules have been followed in giving them ;

(*d*) the districts to which these blocks have been given and the number given to each (districtwise and taluk-wise details to be given) ?

A.—Sri Kadidal MANJAPPA (Chief Minister).—

(*a*) & (*b*) The following are the N.E.S. Blocks sanctioned during the current year :—

Kolar District-Chintamani Taluk.
Chitaldrug—District, Uncovered portions of Davangere and Harihar Taluks.
Mysore—District Periyapatna Taluk.
Bangalore—District, Doddaballapur Taluk.
Hassan District—Belur Taluk.
Tumkur District—Pavagada Taluk.

(*c*) No Rules are prescribed for the selection of Taluks for extending the N.E.S. Scheme. Certain factors like administrative convenience, contiguity of blocks, the percentage of rural population already covered and facilities for increase of food production are generally kept in view.

(*d*) Districtwar distribution of the existing Blocks is as follows :—

Bangalore District—

1. Ramanagaram *cum* Kanakapura.
2. Magadi
3. Nelamangala
4. Dodballapur

Mysore District—

1. Gundlupet
2. Chamarajanagar
3. Hunsur
4. Periyapatna

Tumkur District—

1. Mayasandra
2. Chiknayakanahally
3. Tumkur *cum* Gubbi
4. Pavagada

Hassan District—

1. Holenarasipur
2. Arkalgud
3. Belur

Chikmagalur District—

1. Koppa N. R. Pura
2. Mudigere

Chitaldrug District—

1. Harihar *cum* Davangere
2. Holalkere
3. Jagalur
4. Harihar *cum* Davangere (New)

Kolar District—

1. Sidlaghatta
2. Chintamani
3. Srinivasapur
4. Mulbagal

(SRI KADIDAL MANJAPPA.)

Bellary District—

1. Siraguppa
2. Hospet *cum* Bellary
3. Hospet (including Mallapuram Sub-Taluk).

Shimoga District—

1. Hosanagar
2. Rural Community Project

Mandya District—

1. Malavalli
2. Mandya
3. Krishnarajapet

ಶ್ರೀ ಎಸ್. ಎಚ್. ತಮ್ಮಯ್ಯ.—ಪಿರಿಯಾಪಟ್ಟಣ ತಾಲ್ಲೂಕು ಪಕ್ಕದಲ್ಲಿ ಯಾವ ತಾಲ್ಲೂಕಿನಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡಿದ್ದೀರಿ ?

*ಶ್ರೀ ಕಡಿದಾಳ್ ಮಂಜಪ್ಪ.—ಹುಣಸೂರು ಹತ್ತಿರ ಇರಬೇಕು.

ಶ್ರೀ ಎಸ್. ಎಚ್. ತಮ್ಮಯ್ಯ.—ಆ ಪಕ್ಕದಲ್ಲಿ ಮತ್ಯಾವುದನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರಿಗೆ ನರಿಯಾಗಿ ಅಲ್ಲಿಯ ಟೋಪೋಗ್ರಫಿ ಗೊತ್ತಿದೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಹೆಚ್ಚು ಜನಸಂಖ್ಯೆಯಿರುವಾಗ ಏಕೆ ಅಲ್ಲಿ ಇದನ್ನು ಪ್ರಾರಂಭ ಮಾಡಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ತಾಲ್ಲೂಕಿನಲ್ಲಿ ರುವಂತೆಯೇ ಜನಬಾಹುಳ್ಯ ಇನ್ನೂ ಅನೇಕ ತಾಲ್ಲೂಕುಗಳಲ್ಲಿದೆ.

ಶ್ರೀ ಎಸ್. ಎಚ್. ತಮ್ಮಯ್ಯ.—ಪಿರಿಯಾಪಟ್ಟಣ ತಾಲ್ಲೂಕನ್ನು ತೆಗೆದುಕೊಳ್ಳುವುದಕ್ಕೆ ಯಾರಾದರೂ ಪ್ರಭಾವ ಬೀರಿದರೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಹಿಂದುಳಿದ ಪ್ರದೇಶ.

ಶ್ರೀ ಕೆ. ಲಕ್ಕಪ್ಪ.—ಹಾಸನ ಜಿಲ್ಲೆಯಲ್ಲಿ ಬೇಲೂರಿಗೆ ಈ ಬ್ಲಾಕನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಆಡಳಿತ ಸೌಕರ್ಯ, ಆಹಾರ ಧಾನ್ಯಗಳ ಉತ್ಪತ್ತಿ ಹೆಚ್ಚಿಸುವುದು, ಹಿಂದುಳಿದಿರುವುದು ಮುಂತಾದ ಆಧಾರದ ಮೇಲೆ.

ಶ್ರೀ ಕೆ. ಲಕ್ಕಪ್ಪ.—ಯಾವ ಆಧಾರವಿರಬೇಕೆಂಬುದಕ್ಕೆ ಕಾಂಟಿಗ್ಯೂಯಿಟಿ ಮೈನ್‌ಟೈನ್ ಮಾಡಬೇಕೆಂದು ಹೇಳಿದೆ. ಹಾಗೆ ಮಾಡಿಕೊಂಡು ಅದನ್ನು ತೆಗೆದು ಕೊಂಡಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ಎ. ಇ. ಎಸ್. ಬ್ಲಾಕ್ ಇದೆ.

ಶ್ರೀ ಕೆ. ಲಕ್ಕಪ್ಪ.—ಅಲ್ಲಿಂದ ಮುಂದೆ ಆಲೂರು ತಾಲ್ಲೂಕನ್ನು ಬಿಟ್ಟು ಜಂಪ್ ಮಾಡಿರುವುದಕ್ಕೆ ಕಾರಣ ಏನು ?

ಶ್ರೀ ಕಡಿದಾಳ್ ಮಂಜಪ್ಪ.—ಜಂಪ್ ಮಾಡುವುದಿಲ್ಲ, ಎಲ್ಲಕಡೆಗೂ ಕೊಡಬೇಕೆಂಬುದೇ ಸರ್ಕಾರದ ಉದ್ದೇಶ.

Mr. SPEAKER.—Whether Government are observing contiguity is the question.

Sri Kadidal MANJAPPA.—That is one of the considerations.

ಶ್ರೀ ಕೆ. ಲಕ್ಕಪ್ಪ.—ಚನ್ನರಾಯಪಟ್ಟಣ ತಾಲ್ಲೂಕು ಆಜುಬಾಜಿಗೆ ಈ ಬ್ಲಾಕುಗಳನ್ನು ಕೊಡಬೇಕೆಂದು ವ್ಯವಸಾಯದ ಇಲಾಖೆ ಡೈರೆಕ್ಟರು ಶಿಫಾರ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಕೆ. ಲಕ್ಕಪ್ಪ.—ಕಾಂಟಿಗ್ಯೂಯಿಟಿಯಿರುವುದರಿಂದ ಆಲೂರಿಗೆ ಈ ಬ್ಲಾಕ್ ಕೊಡಬೇಕೆಂದು ಅನೇಕ ಸಲ ಮನವಿ ಮಾಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರೇ ಮನವಿ ಮಾಡಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಪ್ರಿಸಿಪಲ್ ವಯೋಲೇಟ್ ಮಾಡಿ ಕೊಡುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ವಯೋಲೇಟ್ ಮಾಡಿಲ್ಲ.

ಶ್ರೀ ಕೆ. ಲಕ್ಕಪ್ಪ.—ಕಾಂಟಿಗ್ಯೂಯಿಟಿ ಮೈನ್‌ಟೈನ್ ಮಾಡದಿರುವುದರಿಂದ ವಯೋಲೇಟ್ ಮಾಡಿದಂತಾಗಲಿಲ್ಲವೆ ?

Sri Kadidal MANJAPPA.—That is not the only consideration ; there are other considerations also.

ಶ್ರೀ ಕೆ. ಲಕ್ಕಪ್ಪ.—ಎಲ್ಲವನ್ನೂ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ತೆಗೆದು ಕೊಂಡೇ ಮಾಡಿರುವುದು.

ಶ್ರೀ ಟಿ. ಹನುಮಯ್ಯ.—ಎ. ಇ. ಎಸ್. ಬ್ಲಾಕುಗಳನ್ನು ಯಾವ ಸ್ಕೀಂ ಆಧಾರದ ಮೇಲೆ ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—N.E.S. ಸ್ಕೀಂ ಆಧಾರದ ಮೇಲೆ.

ಶ್ರೀ ಟಿ. ಹನುಮಯ್ಯ.—ಸೆಂಟ್ರಲ್ ಪ್ಲಾನಿಂಗ್ ಕಮಿಷನರು ಮನಸ್ಸಿಗೆ ಬಂದ ಹಾಗೆ ಈ ಬ್ಲಾಕುಗಳನ್ನು ಹಂಚಿ ಎಂದು ಹೇಳಿರುವರೆ ?

ಶ್ರೀ ಕಡಿದಾಳ್ ಮಂಜಪ್ಪ.—ಮನಸ್ಸಿಗೆ ಬಂದ ಹಾಗೆ ಹಂಚುವುದಿಲ್ಲವೆಂಬುದು ಮಾನ್ಯ ಸದಸ್ಯರಿಗೇ ಗೊತ್ತಿದೆ.

ಶ್ರೀ ಟಿ. ಹನುಮಯ್ಯ.—ಸೆಂಟ್ರಲ್ ಪ್ಲಾನಿಂಗ್ ಕಮಿಷನರು ಇಂಥ ಅನುಕೂಲವಿದ್ದರೆ ಮಾತ್ರ ಕೊಡಬೇಕೆಂದು ತಿಳಿಸಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ತಿಳಿಸಿದ್ದಾರೆ ; ಅವರು ಇಂಥ ಕಡೆಗೆ ಬ್ಲಾಕ್ ಮಂಜೂರು ಮಾಡಿ ಎಂದು ಹೇಳುವುದಿಲ್ಲ. ನಮ್ಮಲ್ಲಿದ ವಿದ್ಯಮಾನ ಮುಂತಾದ ಅನೇಕ ವಿಷಯಗಳನ್ನು ಗಮನಿಸಿ ಬ್ಲಾಕುಗಳನ್ನು ಹಂಚುತ್ತೇವೆ.

ಶ್ರೀ ಟಿ. ಹನುಮಯ್ಯ.—ಒಂದೇ ಸಬ್-ಡಿವಿಜನ್‌ನಲ್ಲಿ ಏಳೆಂಟು ಕೊಡಬಹುದೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಾಂಟಿಗ್ಯೂಯಿಟಿಗಾಗಿ ಹಾಗೆ ಕೊಡುತ್ತಾರೆ ; ಏಳೆಂಟು ಕೊಟ್ಟಿಲ್ಲ, ನಾಲ್ಕು ಮಾತ್ರ ಕೊಟ್ಟಿದೆ.

ಶ್ರೀ ಟಿ. ಹನುಮಯ್ಯ.—ಮಂತ್ರಿಗಳಿರುವ ಕಡೆ ಮತ್ತೂ ಅದರ ಸುತ್ತುಮುತ್ತ ಕೊಡಬೇಕೆಂಬುದು ತಮ್ಮ ಅಭಿಪ್ರಾಯವೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಂತ್ರಿಗಳು ಇಡೀ ದೇಶವನ್ನು ಪ್ರತಿನಿಧಿಸುವುದರಿಂದ ದೇಶದ ವಿದ್ಯಮಾನ ವನ್ನೆಲ್ಲಾ ಗಮನಿಸಿ ತೀರ್ಮಾನ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ದೇಶವನ್ನೆಲ್ಲಾ ಪ್ರತಿನಿಧಿಸುವುದಾದರೆ ಒಂದೇ ಸಬ್-ಡಿವಿಜ಼ನ್‌ನಲ್ಲಿ ನಾಲ್ಕು ಏಕೆ ಕೊಟ್ಟಿರಿ ?

ಶ್ರೀ ಕಡಿದಾಳ್ ಮಂಜಪ್ಪ.—ಕಂಟಿಗ್ಯೂಯಟಿ ಪ್ರಿಕ್ಸಿಪಲ್ ಮೇರೆ ಮತ್ತು ಯಾವ ಸ್ಥಳಗಳಲ್ಲಿ ಈ ಬ್ಲಾಕುಗಳನ್ನು ಯಶಸ್ವಿಯಾಗಿ ನಡೆಸಬಹುದು ಇವೇ ಮುಂತಾದ ಆಧಾರಗಳನ್ನು ಗಮನಿಸಿ ತೀರ್ಮಾನ ಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯ.—ಯಾವ್ಯಾವ ಆಧಾರಗಳ ಮೇರೆ ವಿಲೇವಾರಿ ಮಾಡಿದ್ದೀರಿ, ಸನ್ನಿವೇಶ ಎಂಥಾದ್ದು ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಅಧ್ಯಕ್ಷರು.—830ನೆಯ (*c*) ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ಅದನ್ನು ತಿಳಿಸಿದೆ.

ಶ್ರೀ ಟಿ. ಹನುಮಯ್ಯ.—ಈ ಉತ್ತರದಲ್ಲಿ ಆ ಸನ್ನಿವೇಶ-ವಿದ್ಯಮಾನ ಇತ್ಯಾದಿಗಳ್ಯಾವುವನ್ನೂ ತಾವು ತಿಳಿಸಿಲ್ಲ ಕಾರಣವೇನು ?

Sri Kadidal MANJAPPA.—I have already answered. It is "contiguity". ನಾನು ತಮಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಟಿ. ಹನುಮಯ್ಯ.—ನಾನು ಕೇಳಿರತಕ್ಕ ಅಂತ ಗಳಿಗೆ ಅದರಲ್ಲಿ ಉತ್ತರವಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಒಂದಕ್ಕೊಂದಕ್ಕೆ ಪರಸ್ಪರ ಹೊಂದಾವಣಿಕೆಯಾಗತಕ್ಕ ಸನ್ನಿವೇಶಗಳಿರ ಬೇಕೆಂಬುದು ಒಂದು ತತ್ವ. ಈ ಯೋಜನೆಯ ಕೆಲಸ ಕಾರ್ಯಗಳು ಯಶಸ್ವಿಯಾಗಿ ಜರುಗಲು ಸೂಕ್ತ ಕಾರ್ಯ ಕ್ರಮಗಳನ್ನು ಕೈಗೊಳ್ಳಲು ಅಲ್ಲಿ ಸರಿಯಾದ ಸನ್ನಿವೇಶ ಗಳಿರಬೇಕು ಎಂಬುದು ಮತ್ತೊಂದು ತತ್ವ.

ಶ್ರೀ ಎಚ್. ಎಂ. ಚೆನ್ನಭಸಪ್ಪ.—ಒಂದೇ ಸಬ್ ಡಿವಿಜ಼ನ್‌ನಲ್ಲಿ ಒಂದೆರಡು ಬ್ಲಾಕುಗಳನ್ನು ಮಂಜೂರು ಮಾಡಿರುವುದಕ್ಕೆ ಕಾರಣವಿಷ್ಟೆ. ಮೊದಲು ಹರಿಹರ ದಾವಣಗೆರೆ ತಾಲ್ಲೂಕುಗಳಲ್ಲಿ N.E.S. ಬ್ಲಾಕು ಗಳನ್ನು ಪ್ರಾರಂಭಿಸಿದಾಗ ಅಕ್ಕಪಕ್ಕದಲ್ಲಿ ಇದ್ದಂಥಾ ಕೆಲವು ಹಳ್ಳಿಗಳನ್ನು ಕೈಬಿಡಲಾಗಿದ್ದಿತು, ಹಾಗೆ ಆ ಹಳ್ಳಿಗಳನ್ನು ಕೈಬಿಟ್ಟುಕೊಂಡು ಅಲ್ಲಿಯ ಆಡಳಿತ ವನ್ನು ನಡೆಸಲು ಬಹಳ ಕಷ್ಟವಾಗಿತ್ತು. ಆ ಕಾರಣ ದಿಂದ ಆ ಹಳ್ಳಿಗಳನ್ನೂ ಸೇರಿಸಿದರೆ ಹೆಚ್ಚು ಅನುಕೂಲ ವಾಗುತ್ತದೆಂದು ಕಂಡು ಬಂದುದರಿಂದ ಈಚೆಗೆ ಆ ಹಳ್ಳಿಗಳನ್ನೆಲ್ಲಾ ಆ ಬ್ಲಾಕಿಗೆ ಸೇರಿಸಲಾಯಿತು. ಅಷ್ಟೇ ಹೊರತು ಅಂಥ ತಾರತಮ್ಯವೇನೂ ಆಗಿಲ್ಲ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಆ ಚಿಕ್ಕಮಗ ಳೂರು ಜಿಲ್ಲೆಗೆ ನ್ಯಾಯವಾಗಿ ಎಷ್ಟು ಕೊಟಾ ದೊರೆಕ ಬೇಕಾಗಿತ್ತೋ ಅಷ್ಟು ದೊರೆಯದಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಆ ಜಿಲ್ಲೆಗೆ ನ್ಯಾಯ ವಾಗಿ ಎಷ್ಟು ದೊರೆಕಬೇಕಾಗಿತ್ತೋ ಅಷ್ಟನ್ನೂ ದೊರೆ ಕಿಸಿ ಕೊಡಲಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಪ್ರತಿಯೊಂದು ಜಿಲ್ಲೆಗೂ 3-4 ಬ್ಲಾಕುಗಳನ್ನು ಕೊಟ್ಟು ನಮ್ಮ ಜಿಲ್ಲೆಗೆ ಮಾತ್ರ ಏಕೆ ಕೇವಲ ಎರಡು ಬ್ಲಾಕುಗಳನ್ನು ಮಾತ್ರವೇ ಕೊಡಲಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ಇತ್ತೀಚೆಗೆ ಬಹು ಪ್ರಾಮುಖ್ಯವಾಗಿ ಗಮನಕ್ಕೆ ತೆಗೆದು ಕೊಂಡಿರುವ ವಿಷಯ ಯಾವುದೆಂದರೆ, ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಜನ ಸಂಖ್ಯೆಯಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಆ ಪ್ರಜಾ ಸಂಖ್ಯೆಗನುಗುಣ ವಾಗಿ ಮಾಡಲಾಗಿದೆ. ಉದಾಹರಣೆಗಾಗಿ ತಮಗೆ ಹೇಳಬೇಕೆಂದರೆ, ತಾವು ಬೆಂಗಳೂರು ಜಿಲ್ಲೆಗೆ ಜಾಸ್ತಿ ಆಯಿತೆಂದು ಭಾವಿಸಿರಬಹುದು. ಆದರೆ ಬೆಂಗಳೂರು ಜಿಲ್ಲೆಯಲ್ಲಿ ಒದಗಿಸಲಾಗಿರುವ ಬ್ಲಾಕುಗಳೂ ಆ ಜಿಲ್ಲೆಯ ಪ್ರಜಾ ಸಂಖ್ಯೆಗೆ ಸೇಕಡ 16 ರಂತೆ ಇದೆ. ತುಮಕೂರು ಜಿಲ್ಲೆಗೆ ಸೇಕಡ 18ರ ಪ್ರಕಾರವೂ ಹಾಸನ ಜಿಲ್ಲೆಗೆ ಸೇಕಡ 22ರ ಪ್ರಕಾರವೂ, ಮೈಸೂರು ಜಿಲ್ಲೆಗೆ ಸೇಕಡ 22ರ ಪ್ರಕಾರವೂ ಚಿತ್ರ ದುರ್ಗ ಜಿಲ್ಲೆಗೆ ಸೇಕಡ 24 ರಂತೆಯೂ ಕೊಲಾರ ಜಿಲ್ಲೆಗೆ ಸೇಕಡ 24 ರಂತೆಯೂ, ಬಳ್ಳಾರಿ ಜಿಲ್ಲೆಗೆ ಸೇಕಡ 30 ರಂತೆಯೂ, ಚಿಕ್ಕಮಗಳೂರು ಜಿಲ್ಲೆಗೆ ಸೇಕಡ 32 ರಂತೆಯೂ, ಮಂಡ್ಯ ಜಿಲ್ಲೆಗೆ ಸೇಕಡ 30 ರಂತೆಯೂ, ಶಿವಮೊಗ್ಗಾ ಜಿಲ್ಲೆಗೆ ಸೇಕಡ 36 ರಂತೆಯೂ ಒದಗಿಸಲಾಗಿದೆ. ಇನ್ನು ಮುಂದೆ ಉಳಿದ ಜಿಲ್ಲೆಗೆ ಕೊಡಲಾಗುತ್ತದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಚಿಕ್ಕಮಗ ಳೂರು ಜಿಲ್ಲೆಗೆ ಸೇಕಡ 30 ರಷ್ಟು ಜನರಿಗೆ ಮಾತ್ರ ಅನುಕೂಲವಾಗಿರುವುದರಿಂದ ಈ ಮಲೆನಾಡು ಪ್ರಾಂತ್ಯಕ್ಕೆ ಹೆಚ್ಚಿನ ರಿಯಾಯಿತಿಗಳನ್ನು ತೋರಿಸ ದಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮಲೆನಾಡು ಪ್ರದೇಶ ವೆಂದೇ ಅಲ್ಲಿಗೆ ಈಗ ಎರಡು ಬ್ಲಾಕುಗಳನ್ನು ಕೊಟ್ಟಿದ್ದೇವೆ.

ಶ್ರೀಮತಿ ಬಿ ಎಲ್. ಸುಬ್ಬಮ್ಮ.—ಈ ರೀತಿಯ ಸೌಲಭ್ಯಗಳನ್ನು ತಾವು ಕೇವಲ ಅಲ್ಲಿ 5-6 ಹೋಬಳಿ ಗಳವರಿಗೆ ಮಾತ್ರವೇ ಒದಗಿಸಿ ಇನ್ನುಳಿದ ಹೋಬಳಿ ಗಳಿಗೆ ಅನುಕೂಲ ಕಲ್ಪಿಸಿ ಕೊಡದಿದ್ದರೆ ಆ ಜನರಲ್ಲಿ ಒಂದು ಭಿನ್ನಾಭಿಪ್ರಾಯ ಮೂಡುವುದಕ್ಕೆ ಅವಕಾಶ ವಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಯೋಜನೆಯೇನೂ ಇಲ್ಲಗೇ ಮುಗಿಯಲಲ್ಲ. ಈ ಪಾಲಿಸಿಯಿನ್ನೂ ಮುಂದು ವರಿಸಿಕ್ಕೊಂಡು ಹೋಗತಕ್ಕದ್ದಾಗಿದೆ. ಆದಕಾರಣ ನಾವೀಗ ಮಲೆನಾಡು ವಿಚಾರವನ್ನು ಕೈಬಿಟ್ಟಿಲ್ಲ. ನಮ್ಮ ಗಮನದಲ್ಲಿಟ್ಟು ಕೊಂಡೇಇದ್ದೇವೆ.

Mysore Government Road Transport Buses.

Q.—656. Sri V. M. MASCARENHAS (St. John's Hill).—

Will the Government be pleased to state :—

(*a*) the number of buses owned by the Mysore Government Road Transport on 1st September 1956 ;

(*b*) the number actually running ?

A.—Sri H. SIDDAVEERAPPA (Minister for Home and Finance.)—

(*a*) 245.

(*b*) 196.

Sri V. M. MASCARENHAS.—May I know whether the remaining 49 vehicles are unserviceable ?